ಅ) ಖನಿಜ, ಕೃಷಿ, ತೋಟಗಾರಿಕೆ ಇತ್ಯಾದಿ ಸಂಸ್ಕರಣ ವಸ್ತುಗಳನ್ನು ರಫ್ತು ಮತ್ತು ಆಮದು ಮಾಡಿಕೊಳ್ಳಲು ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಸದರಿ ಬಂದರುಗಳು ಪೂರಕವಾಗಿವೆಯಲ್ಲವೆ ?

ಇ) ಹಾಲಿ ಕಾರವಾರ ಬಂದರು ಅಭಿವೃದ್ಧಿ ಯೋಜನೆಯ ವಿವರಗಳನ್ನು ಒದಗಿಸಿ ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಕಾರವಾರವನ್ನು ಕೇಂದ್ರ ಸರ್ಕಾರವು ಬೃಹತ್ ಬಂದರು (Major Port) ಎಂದು ವರ್ಗೀಕರಿಸಿಲ್ಲ. ಇದು ಚಿಕ್ಕ ಬಂದರಾಗಿದೆ. (Minor Port) ಆದರೂ ಇದು ಕರ್ನಾಟಕ ಆಯಾತ ನಿರ್ಯಾತ ವಾಣಿಜ್ಯದ ದೃಷ್ಟಿಯಿಂದ ಮಹತ್ವ ಹೊಂದಿದೆ.

ಆ) ಹೌದು

ಇ) ಹಾಲಿ ಕಾರವಾರ ಬಂದರಿನಲ್ಲಿ ಬ್ರೇಕ್‌ವಾಟರ್ ನಿರ್ಮಾಣವನ್ನು ಕೈಗೊಳ್ಳಲಾಗಿದೆ. ಎರಡನೇ ಹಂತದ ಕಾಮಗಾರಿಗೆ ಸಲಹೆಗಾರರನ್ನು ನೇಮಿಸಿ, ಪೂರ್ವಭಾವಿ ವರದಿಯನ್ನು ಪಡೆಯಲಾಗಿದೆ. ಕಂಟೈನರ್ ಸೇವೆ (Containerisation) ಬಗ್ಗೆ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

## ಮಂಗಳೂರಿನ ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಕಂಪನಿಗೆ ಸಹಕಾರಿ ಸಂಘಗಳ ಷೇರು ಹಣ

1079 (1351) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಗಳೂರಿನ ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಕಂಪನಿಯಲ್ಲಿ ರಾಜ್ಯದ ಎಷ್ಟು ಸಹಕಾರಿ ಸಂಘಗಳು ಎಷ್ಟೆಷ್ಟು ಹಣವನ್ನು ಷೇರು ಹಣವನ್ನಾಗಿ ತೊಡಗಿಸಿದೆ ?

ಆ) ಈ ಕಂಪನಿ ಕಳೆದ ಮೂರು ವರ್ಷಗಳಲ್ಲಿ ಮಾರಾಟ ಮಾಡಿದ ವಿವಿಧ ಗೊಬ್ಬರಗಳ ಮೊತ್ತವೆಷ್ಟು ?

ಇ) ಈ ಕಾರ್ಖಾನೆ 31.3.2002ಕ್ಕೆ ಗಳಿಸಿದ ಕೂಡಿಬಿದ್ದ ಹಾನಿಯ ಮೊತ್ತ ವೆಷ್ಟು ; ಹಾಗೂ ಈ ಕಂಪನಿಗೆ 31.3.2002 ರವರೆಗೆ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ನೀಡಿರುವ ವಿವಿಧ ಹಣಕಾಸು ನೆರವು ಮತ್ತು ಸಾಲದ ಮೊತ್ತವೆಷ್ಟು ?

ಈ) ಈ ಕಂಪನಿಯ ಅಧಿಕಾರಿಗಳು 2000-01, 2001-02, 2002-03ರಲ್ಲಿ ಪಡೆದ ಒಟ್ಟಾರೆ ಸಂಭಾವನೆ ಎಷ್ಟು ?

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಸದರಿ ಕಂಪನಿಯಲ್ಲಿ ಕರ್ನಾಟಕ ರಾಜ್ಯದ 225 ಸಹಕಾರಿ ಸಂಘಗಳು ರೂ. 10-00 ಮೌಲ್ಯದ 2,47,735 ಈಕ್ವಿಟಿ ಷೇರುಗಳನ್ನು ಹೊಂದಿರುತ್ತವೆ.

ಆ) ಈ ಕಂಪನಿಯು ಕಳೆದ 3 ವರ್ಷಗಳಲ್ಲಿ ಮಾರಾಟ ಮಾಡಿರುವ ವಿವಿಧ ಗೊಬ್ಬರಗಳ ವಿವರ ಕೆಳಕಂಡಂತಿದೆ.

| ಗೊಬ್ಬರದ ವಿಧಗಳು | 2001 | 2001 | 2000 | 2001 | 1999 | 2000 |
|---|---|---|---|---|---|---|
| | ಪ್ರಮಾಣ (ಎಂಟಿಎಸ್) | ಮೌಲ್ಯ (ರೂ.ಲಕ್ಷ ಗಳಲ್ಲಿ) | ಪ್ರಮಾಣ (ಎಂಟಿಎಸ್) | ಮೌಲ್ಯ (ರೂ.ಲಕ್ಷ ಗಳಲ್ಲಿ) | ಪ್ರಮಾಣ (ಎಂಟಿಎಸ್) | ಮೌಲ್ಯ (ರೂ.ಲಕ್ಷ ಗಳಲ್ಲಿ) |
| ಯೂರಿಯಾ | 3,61,383 | 34,685.08 | 3,48,713 | 43,302.34 | 3,33,289 | 33,859.19 |
| ಡಿ.ಎ.ಪಿ. | 1,53,250 | 19,295.84 | 1,67,000 | 20,591.91 | 2,08,769 | 25,391.44 |
| ಇತರೆ | 34,159 | 1,948.82 | 57,526 | 3,607.54 | 35,806 | 2,064.44 |
| ಒಟ್ಟು | 5,48,792 | 55,929.74 | 5,73,239 | 67,501.79 | 5,77,864 | 61,315.23 |

ಇ) ಈ ಕಂಪನಿಯು 1996-97 ರಿಂದ ಲಾಭದಲ್ಲಿದೆ. 1996-97 ರಿಂದ ಪಡೆದಿರುವ ನಿವ್ವಳ ಲಾಭ ಕೆಳಕಂಡಂತಿದೆ.

| ವರ್ಷ | ರೂ. ಕೋಟಿಗಳಲ್ಲಿ |
|---|---|
| 1996-97 | 0.18 |
| 1197-98 | 17.33 |
| 1998-99 | 30.23 |
| 1999-2000 | 34.84 |
| 2000-01 | 40.15 |
| 2001-02 | 20.58 |

ಕರ್ನಾಟಕ ಸರ್ಕಾರ ನೀಡಿರುವ ಆರ್ಥಿಕ ಸಹಾಯ :

ಸಾಲ : ರೂ. 14.59 ಕೋಟಿಗಳು

ಮಾರಾಟ ತೆರಿಗೆ ಮುಂದೂಡುವಿಕೆ : ರೂ. 13.73 ಕೋಟಿಗಳು

ಒಟ್ಟು : ರೂ. 28.32 ಕೋಟಿಗಳು

ಬಿ.ಐ.ಎಫ್.ಆರ್.ನ ಮಂಜೂರು ಮಾಡಿರುವ ಕಂಪನಿಯ ಪುನರುಜ್ಜೀವನ ಯೋಜನೆಯಂತೆ ಸದರಿ ಸಾಲವನ್ನು 2005-06ನೇ ಸಾಲಿನಿಂದ ಪ್ರಾರಂಭಿಸಿ 5 ವಾರ್ಷಿಕ ಸಮ ಕಂತುಗಳಲ್ಲಿ ಕಂಪನಿಯು ತೀರಿಸಬೇಕಾಗಿದೆ.

ಕೇಂದ್ರ ಸರ್ಕಾರದಿಂದ ಕಂಪನಿಯು ಯಾವುದೇ ಹಣ ಸಹಾಯ ಪಡೆದಿರುವುದಿಲ್ಲ.

ಈ) ಕಂಪನಿಯ ಅಧಿಕಾರಿಗಳು ಪಡೆದಿರುವ 3 ವರ್ಷಗಳ ಒಟ್ಟಾರೆ ಸಂಭಾವನೆ ಈ ಕೆಳಕಂಡಂತಿದೆ.

| ವರ್ಷ | ಅಧಿಕಾರಿಗಳ ಸಂಖ್ಯೆ | ರೂ.ಲಕ್ಷಗಳಲ್ಲಿ |
|---|---|---|
| 2000-01 | 332 | 570.47 |
| 2001-02 | 303 | 706.34 |
| 2002-03 | 315 | 763.35 |